ಡಿ .ಡಬ್ಲ್ಯೂಃ 01.

ದಿನಾಂಕಃ 06-09-2018 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿಪರ ಶ್ರೀ ಸಿ.ಎಸ್.ಎಸ್. ವಕೀಲರಿಂದಃ

ನನ್ನ ತಕರಾರಿನಲ್ಲಿ ಕೆಂಡೇಗೌಡ ಮತ್ತು ಅವರ ಮಕ್ಕಳಾದ ಸಣ್ಣತಿಮ್ಮೇಗೌಡ ಮತ್ತು ಬಿ.ಕೆ. ಸಣ್ಣೆ ಗೌಡ ಹಾಗೂ ಸಣ್ಣ ಕರಿಗೌಡ ಮತ್ತು ಅವರ ಮಗ ಚಿಕ್ಕೇಗೌಡ ರವರ ನಡುವೆ ದಿಃ 12-10-1973 ರಲ್ಲಿ ವಿಭಾಗ ಆಗಿದೆ ಎಂದು ಬರೆಸಿದ್ದೇನೆ. ದಿಃ 12-10-1973 ರಿಂದ ನಾವು ಮತ್ತು ವಾದಿಗಳು ಒಟ್ಟಾಗಿ ಕುಟುಂಬದಲ್ಲಿ ಇಲ್ಲ ಎಂದರೆ ಸರಿ. ದಿಃ 12-10-1973 ರಂದು ಆದಂತಹ ವಿಭಾಗ ಪತ್ರದ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ . ದಿಃ 12-10-1973 ರಂದು ವಿಭಾಗ ಆಗಿದ್ದರೂ ಸಹ ವಾಸ್ತವವಾಗಿ ನಾವು ಬೇರೆ ಬೇರೆ ಆಗಿಲ್ಲ. ದಿಃ 12-10-1973 ರ ನಂತರ ವಿಭಾಗದಂತೆ ಕೆಲವು ಆಸ್ತಿಗಳು ಖಾತೆ ಆಗಿವೆ ಇನ್ನೂ ಕೆಲವು ಆಸ್ತಿಗಳು ವಿಭಾಗ ಆಗಿಲ್ಲ. ಸ.ನಂಃ 24/1, 24/2, 24/3 , 24/4 ರ ಜಮೀನುಗಳು ವಿಭಾಗದಲ್ಲಿ ನಮಗೆ ಬಂದಿದ್ದರೂ ಸಹ ಅವುಗಳು ಖಾತೆ ಆಗಿರುವುದಿಲ್ಲ. ಮೇಲೆ ಹೇಳಿದ ಜಮೀನುಗಳ ಖಾತೆಯು ನನ್ನ ತಾತ ತೀರಿಕೊಂಡ ನಂತರ ನನ್ನ ತಂದೆ ಹೆಸರಿಗೆ ಬಂದು, ಈಗ ನನ್ನ ಹೆಸರಿನಲ್ಲಿವೆ. ನನ್ನ ತಾತ ತೀರಿಕೊಂಡಿದ್ದು 2003 ರಲ್ಲಿ. ನನ್ನ ತಾತ ತೀರಿಕೊಂಡಿರುವ ಬಗ್ಗೆ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ. ಸ.ನಂಃ 34/1 ಮತ್ತು 31/3 ರ ಖಾತೆ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲಾ. ಮೂಲತಃ ಈ ಸರ್ವೆ ನಂಬರುಗಳು ನಮ್ಮ ಕುಟುಂಬಕ್ಕೆ ಸೇರಿದ್ದವು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲಾ. ಸ.ನಂಃ 24/1 ರಿಂದ 24/4 ರ ವರೆಗೆ ಒಟ್ಟು 3 ಎಕರೆ 25 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲಾ. ಸ.ನಂಃ 24 ರ ಜಮೀನನ್ನು ಸಣ್ಣೇನಹಳ್ಳಿ ಗೌಡನ ಇಬ್ಬರು ಮಕ್ಕಳು ಸಣ್ಣಕರಿಗೌಡ ಮತ್ತು ಕಂಪೆಗೌಡ ಎನ್ನುವವರು ಕೇಶವಯ್ಯ ಬಿನ್ ಪುಟ್ಟಯ್ಯ ರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲಾ.

ಸದರಿ ಕೇಶವಯ್ಯ ತಾನು ಕ್ರಯಕ್ಕೆ ಕೊಂಡ ಜಮೀನನ್ನು ಆತನ ಮಗಳು ಕಾವೇರಿ ಎನ್ನುವವರಿಗೆ ದಾನಪತ್ರದ ಮೂಲಕ ಕೊಟ್ಟಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲಾ . ಕಾವೇರಿಯವರು ಸದರಿ ಜಮೀನನ್ನು ದುರಸ್ತಿ ಪಡೆಸುವ ವೇಳೆಯಲ್ಲಿ ತನ್ನ ತಂದೆ ಕೊಂಡಿದ್ದ ಜಮೀನನ್ನು ಸ.ನಂಃ 31/3 ವಿಸ್ತೀರ್ಣ 1 ಎಕರೆ 30 ಮತ್ತು ಸ.ನಂಃ 34/1 ವಿಸ್ತೀರ್ಣ 1 ಎಕರೆ 27 ಗುಂಟೆ ಒಟ್ಟು 3 ಎಕರೆ 25 ಗುಂಟೆ ಎಂದು ಕಂಡು ಬಂದಿದೆ ಎಂದರೆ ಸರಿಯಲ್ಲಾ. ಕೇವಶಯ್ಯ ಎನ್ನುವವರು ಎಸ್.ಪಿ ಆಗಿದ್ದರು ಎನ್ನು ವಿಚಾರ ನನಗೆ ಗೊತ್ತಿಲ್ಲಾ. ತಿದ್ದುಪಡಿ ಪ್ತತ್ರ ಬರೆಸಿಕೊಳ್ಳದೇ

ಸದರಿ ಸ. ನಂ. ಗಳಿಗೆ ಖಾತೆ ಬದಲಾಯಿಸಿಕೊಂಡರು ಎನ್ನುವ ವಿಚಾರ ನನಗೆ ಗೊತ್ತಿಲ್ಲಾ. ಆದ್ದರಿಂದ ಸ.ನಂ. 24/1 ರಿಂದ 24/4 ರವರೆಗಿನ ಜಮೀನಿನ ಖಾತೆ ವಾದಿಯ ತಂದೆ ಹೆಸರಿನಲ್ಲಿ ಬಂತು ಎಂದರೆ ಸರಿ. ಅದರಂತೆ ಸ.ನಂಃ 34/1 ಮತ್ತು 31/3 ರ ಖಾತೆಗಳು ಸಹ ವಾದಿಯ ತಂದೆ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲಾ. ತಾಲ್ಲೂಕು ಕಚೇರಿಯಿಂದ ವಾದಿಗಾಗಲೀ ವಾದಿಯ ತಂದೆಗಾಗಲೀ ಸ.ನಂ. 24 ರ ಖಾತೆ ಬದಲಾವಣೆ ಬಗೆಗ ನೋಟೀಸ್ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಗ್ರಾಮದಲ್ಲಿ ಗ್ರಾಮಲೆಕ್ಕಾಧಿಕಾರಿ ಮತ್ತು ಇತರೆ ಮೂರು ಜನ ಬಂದು ಹೇಳಿಕೆ ಮಾಡಿಕೊಂಡಿದ್ದಾರೆ ಎಂದಿದ್ದಾರೆ. ವಾದಿ ಮತ್ತು ಆತನ ತಂದೆ ಈ ಬಗ್ಗೆ ಹೇಳಿಕೆ ಕೊಟ್ಟಿರುತ್ತಾರೆ. ಸದರಿ ಹೇಳಿಕೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಸದರಿ ಹೇಳಿಕೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೇನು ತೊಂದರೆ ಇಲ್ಲಾ. 2003 ರಲ್ಲಿ ನನ್ನ ತಾತ ತೀರಿಕೊಂಡಿದ್ದು ಆ ಸಮಯದಲ್ಲಿ ದಾವಾ ಸ್ವತ್ತಿನ ಖಾತೆ ನನ್ನ ತಾತನ ಹೆಸರಿನಲ್ಲಿ ಇರಲಿಲ್ಲಾ. ಸಾಕ್ಷಿ ಮುಂದುವರೆದು ನನ್ನ ತಾತನ ಅಣ್ಣನ ಹೆಸರಿನಲ್ಲಿ ಇತ್ತು ಎಂದಿದ್ದಾರೆ. ನನ್ನ ತಾತನ ಅಣ್ಣ ಎಂದರೆ ವಾದಿಯ ತಂದೆ.

1973 ರಲ್ಲಿ ಆದಂತಹ ವಿಭಾಗದ 35 ವರ್ಷಗಳ ನಂತರ ಸ.ನಂಃ 21/1 ರಿಂದ 24/4 ರ ವರೆಗೆ ಖಾತೆಯನ್ನು ನಮ್ಮ ಹೆಸರಿಗೆ ಬದಲಾಯಿಸಿಕೊಂಡಿದ್ದೇವೆ. ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ವಾದಿಯ ಹೆಸರಿನಲ್ಲಿ ಇದ್ದಂತಹ ದಾಖಲೆಗಳನ್ನು ಮುಚ್ಚಿಟ್ಟು ನಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೇವೆಂದರೆ ಸರಿಯಲ್ಲಾ. ಕಾನೂನಿನ ಪ್ರಕಾರ ಕಂದಾಯ ಅಧಿಕಾರಿಗಳು ಮೂಲ ಖಾತೆದಾರರ ಹೇಳಿಕೆ ಪಡೆದೇ ಖಾತೆ ಬದಲಾವಣೆ ಮಾಡಬೇಕು ಎಂದರೆ ಸರಿ. ಆ ರೀತಿ ಸುಳ್ಳು ಖಾತೆ ಮಾಡಿಸಿಕೊಂಡಿದ್ದರಿಂದ ನಾನು ನ್ಯಾಯಾಲಯದ ಮುಂದೆ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲಾ. ನಿಡಿ -4 ನ್ನು ನನ್ನ ತಂದೆ, ನಾನು ಮತ್ತು ನನ್ನ ತಮ್ಮ ಸೇರಿ ವಾದಿಗಳಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಸದರಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆಂದೆರ ಸರಿಯಲ್ಲಾ. ಅದರನ್ವಯ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದವೆಂದರೆ ಸರಿಯಲ್ಲಾ. ದಿಃ 18-03-2013 ರಂದು ವಾದಿ ತಮ್ಮ ವಕೀಲರ ಮುಖಾಂತರ ಮೇಲ್ಕಂಡ ವಿಚಾರಕ್ಕೆ ಸಂಬಂದಪಟ್ಟಂತೆ ನೋಟೀಸ್ ಕೊಟ್ಟಿದ್ದರು ಎಂದರೆ ಸರಿ. ನಾನು ನಮ್ಮ ವಕೀಲರಿ ಮುಖಾಂತರ ಉತ್ತರ ನೀಡಿದ್ದೇನೆಂದರೆ ಸರಿ. ನಿಡಿ-12 ರಲ್ಲಿ ನಾನು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ಅದರಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲಾ. ವಾದಿಯ ತಂದೆಯ ಹೆಸರು ಕೆಂಪೇಗೌಡರ ಬದಲು ಚಂದೇಗೌಡ ಎನ್ನು ಬಗ್ಗೆ

ಯಾವುದೇ ದಾಖಲೆ ಇಲ್ಲ. ನಮ್ಮ ವಕೀಲರ ಹತ್ತಿರ ಹೇಳಿ ಬರೆಸಿದ್ದೇವೆ ಎಂದಿದ್ದಾರೆ. ದಾವಾ ಷೆಡ್ಯೂಲ್ ನ ಚಕ್ಕುಬಂದಿ ಸ.ನಂಃ 24/1 ರಿಂದ 24/4 ಕ್ಕೆ ಅನ್ವಯಿಸಿದ್ದು ಎಂದರೆ ಸರಿಯಲ್ಲಾ. ನನ್ನ ಲಿಖಿತ ಹೇಳಿಕೆಯಲ್ಲಿ ನೈಜವಾದ ಚಕ್ಕುಬಂದಿಯನ್ನು ಹೇಳಿ ಬರೆಸಿದ್ದೇನೆ.

ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಸ್ವಾಮಿ ಬಿನ್ ಮೊಟಯ್ಯ ರವರ ಜಮೀನು, ಸದರಿ ಸ್ವಾಮಿ ರವರ ಹೆಂಡತಿ ಹೆಸರು ಹೊನ್ನಮ್ಮ ಎಂದರೆ ಸರಿಯಲ್ಲಾ. ಸಾಕ್ಷಿ ಮುಂದುವರೆದು ಆಕೆ ಸವಿತಾ ಎಂದಿದ್ದಾರೆ. ಪಶ್ಚಿಮಕ್ಕೆ ಜವರೇಗೌಡರ ಮಗ ಲೊಕೇಶ್ ರವರ ಜಮೀನು, ಉತ್ತರಕ್ಕೆ ಚಲುವಯ್ಯ ರವರ ಜಮೀನು, ದಕ್ಷಿಣಕ್ಕೆ ಲೋಕನಾಥ ರವರ ಜಮೀನು, ಅವರ ತಂದೆ ಹೆಸರು ಜವರೇಗೌಡ ಬಿನ್ ಚಿಕ್ಕಹರವೇಗೌಡ. ದಾವಾ ಸ್ವತ್ತಿಗೆ ನೀಡಿರುವ ಚಕ್ಕುಬಂದಿಯನ್ನು ನಮ್ಮ ವಕೀಲರ ಮುಖಾಂತರ ಕೇಳಿ ತಿಳಿದುಕೊಂಡಿರುತ್ತೇನೆ. ಸ್ವಾಮಿರವರ ಹೆಂಡತಿ ಹೆಸರು ಸವಿತಾ ಎನ್ನುವ ಬಗ್ಗೆ ದಾಖಲೆಯನ್ನು

ಈ ಹಂತದಲ್ಲಿ ಮುಂದಿನ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕೋರಿಕೆ ಮೇರೆಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.